# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 213 |
| ಸದಸ್ಯರ ಹೆಸರು | ಶ್ರೀಮತಿ ಉಮಾಶ್ರೀ |
| ಉತ್ತರಿಸುವ ದಿನಾಂಕ | 14.02.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹನ್ನೊಂದನೇ ಶತಮಾನದಲ್ಲೇ ವಚನಗಳ ರಚನೆಯ ಮೂಲಕ ವಚನ ಸಾಹಿತ್ಯವನ್ನು ಸಾರಿದ ಶ್ರೇಷ್ಠ ಸಂತ "ಶ್ರೀ ದೇವರ ದಾಸಿಮಯ್ಯ" ನವರ ಜನ್ಮ ಸ್ಥಳವಾದ ಯಾದಗಿರಿ ಜಿಲ್ಲೆ ಮುದನೂರು ಗ್ರಾಮದಲ್ಲಿರುವ ದೇಗುಲಗಳು ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ದೇಗುಲಗಳ ಅಭಿವೃದ್ಧಿಗಾಗಿ ಸರ್ಕಾರವು ಮೀಸಲಿಟ್ಟ ಅನುದಾನ ಎಷ್ಟು; ಅನುದಾನದ ಕ್ರಿಯಾ ಯೋಜನೆಯ ಸಂಪೂರ್ಣ ವಿವರ ನೀಡುವುದು; ಹಾಗೂ ಇದುವರೆಗೂ ಕೈಗೊಂಡ ಕಾಮಗಾರಿಗಳು ಹಾಗೂ ಬಾಕಿ ಉಳಿದ ಕಾಮಗಾರಿಗಳು ಯಾವುವು; ಅನುದಾನದ ಹಂಚಿಕೆ ಮತ್ತು ಬಾಕಿ ವಿವರವನ್ನು ನೀಡುವುದು; | • ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ, ಹನ್ನೊಂದನೇ ಶತಮಾನದಲ್ಲೇ ವಚನಗಳ ರಚನೆಯ ಮೂಲಕ ವಚನ ಸಾಹಿತ್ಯವನ್ನು ಸಾರಿದ ಶ್ರೇಷ್ಠ ಸಂತ **"ಶ್ರೀ ದೇವರ ದಾಸಿಮಯ್ಯ"** ನವರ ಜನ್ಮ ಸ್ಥಳವಾದ ಯಾದಗಿರಿ ಜಿಲ್ಲೆ ಮುದನೂರು ಗ್ರಾಮದಲ್ಲಿರುವ ದೇಗುಲಗಳು ಪಾಳು ಬಿದ್ದಿರುವುದು ಕುರಿತಂತೆ ಪ್ರಸ್ತುತ ಮುದನೂರು ಗ್ರಾಮದಲ್ಲಿ ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ.<br>• ಆದರೆ ಸದರಿ ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗಾಗಿ ಸರ್ಕಾರದ ಆದೇಶ ಸಂಖ್ಯೆ:ಕಂಇ 99 ಮುಅಬಿ 2011 ಬೆಂಗಳೂರು ದಿನಾಂಕ:17/05/2011ರ ಮೂಲಕ ಶ್ರೀ ದೇವರ ದಾಸಿಮಯ್ಯ ದೇವಸ್ಥಾನ ಮುದನೂರ(ಬಿ) ಗ್ರಾಮ ತಾ:ಹುಣಸಗಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ಒಟ್ಟು ಮೀಸಲಿಟ್ಟ ಅನುದಾನ ರೂ.500.00 ಲಕ್ಷಗಳ ಪೈಕಿ ಪ್ರಥಮ ಕಂತಾಗಿ ರೂ.300.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br>• ಸದರಿ ಮುದನೂರು ಗ್ರಾಮದ ದೇವರ ದಾಸಿಮಯ್ಯ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗಳ ಕುರಿತಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಇಲಾಖಾ ಅಧಿಕಾರಿಗಳೊಂದಿಗೆ ದಿನಾಂಕ:13.07.2022 ಮತ್ತು 20.01.2023ರ ದಿನಾಂಕಗಳಂದು ನಡೆದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿರುತ್ತದೆ. **(ಸಭಾ ನಡವಳಿ ಪ್ರತಿ ಲಗತ್ತಿಸಿದೆ)**<br>• ಕ್ರಿಯಾ ಯೋಜನೆಯ ವಿವರವನ್ನು ಹಾಗೂ ಇದುವರೆಗೂ ಕೈಗೊಂಡ ಕಾಮಗಾರಿಗಳು ಮತ್ತು ಬಾಕಿ ಇರುವ ಕಾಮಗಾರಿಗಳ ವಿವರವಾದ ತಖ್ತೆ:ಯನ್ನು ಸಹ **ಅನುಬಂಧ-1ರಲ್ಲಿ ಲಗತ್ತಿಸಿದೆ.** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಮುದನೂರು ಗ್ರಾಮದ ದೇವರ ದಾಸಿಮಯ್ಯ ದೇಗುಲದ ಸುತ್ತಲೂ ಇದ್ದ 108 ದೇವಸ್ಥಾನಗಳನ್ನು ಒತ್ತುವರಿ ಮಾಡಿ ಆ ಜಾಗದಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡಿರುವ ಗ್ರಾಮಸ್ಥರಿಗೆ ಸರ್ಕಾರದ ಆದೇಶದಂತೆ ಬೇರೆಡೆ ಸ್ಥಳಾಂತರಿಸಿ 10 ಎಕರೆ ಜಮೀನನ್ನು ಮಂಜೂರು ಮಾಡಿದ್ದರೂ ಕೂಡ ಇಲ್ಲಿನ ಜಿಲ್ಲಾಡಳಿತವು ಯಾವುದೇ ತೆರವು ಕಾರ್ಯಾಚರಣೆಯನ್ನು ಮಾಡದೇ ಇರಲು ಕಾರಣವೇನು; (ವಿವರವಾದ ಮಾಹಿತಿ ನೀಡುವುದು) | • ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ/70/ಎಲ್‌ಜಿಸಿ/2008, ದಿನಾಂಕ:08.08.2008ರ ಅನ್ವಯ ಸರ್ಕಾರಿ ಜಮೀನುಗಳನ್ನು ಸಾರ್ವಜನಿಕರ ವಿವಿಧ ಉದ್ದೇಶಗಳಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ 04-00 ಹೆಕ್ಟೇರ್ (09-36 ಎಕರೆ-ಗುಂಟೆ,) ವರೆಗೆ ಮಾತ್ರ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.<br><br>• ದೇವರ ದಾಸಿಮಯ್ಯ ದೇಗುಲದ ಸುತ್ತಲೂ ಇದ್ದ 108 ದೇವಸ್ಥಾನಗಳನ್ನು ಒತ್ತುವರಿ ಮಾಡಿ ಅನಧಿಕೃತವಾಗಿ ಮನೆ ನಿರ್ಮಿಸಿಕೊಂಡಿರುವ ಗ್ರಾಮಸ್ಥರಿಗೆ ಬೇರೆ ಮನೆ ನಿರ್ಮಾಣ ಮಾಡಲು ಸರ್ವೆ ನಂ:183/ಅ ರಲ್ಲಿ 10 ಎಕರೆ ಜಮೀನು ಕಾಯ್ದಿರಿಸಲಾಗಿದ್ದು, ಜಮೀನು ಸರ್ವೆ ಸಂದರ್ಭದಲ್ಲಿ, ಸದರಿ ಜಮೀನಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ನಿರ್ಮಾಣವಾಗಿದ್ದು, ಈ ಸರ್ವೆ ನಂಬರ್‌ನಲ್ಲಿ ಮಸೀದಿ/ದರ್ಗಾ, ಮನೆಗಳು ನಿರ್ಮಾಣ ಗೊಂಡಿರುತ್ತವೆ. ಪ್ರಸ್ತುತ 04-00 ಎಕರೆ ಜಮೀನು ಮಾತ್ರ ಲಭ್ಯವಿರುವುದರಿಂದ ಈ ವಿಷಯದ ಕುರಿತಂತೆ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ:ಸಂ/ಕಂ/ಭೂಮಂ/06/2023-24/E-97062, ದಿನಾಂಕ: 12/01/2024ರ ಪತ್ರದ ಮೂಲಕ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮುದನೂರು(ಬಿ) ಗ್ರಾಮದ ಸರ್ಕಾರಿ ಖಾರೀಜ ಖಾತಾ ಸ.ನಂ.239/2 ರಲ್ಲಿ ಕ್ಷೇತ್ರ 31-18 ಗುಂಟೆ ಜಮೀನಿನಲ್ಲಿ ಕ್ಷೇತ್ರ 10.00 ಎಕರೆ ಜಮೀನನ್ನು ಮುದನೂರು(ಬಿ) ಗ್ರಾಮದ ಶ್ರೀ ದೇವರ ದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿ 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಜಮೀನನ್ನು ಮಂಜೂರು ಮಾಡುವ ಕುರಿತು ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರು ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು **(ಪ್ರತಿ ಲಗತ್ತಿಸಿದೆ).** |
| ಇ) | ಯಾವ ಕಾಲಮಿತಿಯೊಳಗೆ ಸರ್ಕಾರದ ಆದೇಶದಂತೆ ಒತ್ತುವರಿ ಮಾಡಿರುವ ಜಾಗವನ್ನು ತೆರವುಗೊಳಿಸಲಾಗುವುದು? | ಹುಣಸಗಿ ತಾಲ್ಲೂಕಿನ ಮುದನೂರು ಗ್ರಾಮದ ಶ್ರೀದೇವರ ದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿ ದೇವಸ್ಥಾನದ ಜಾಗದಲ್ಲಿ ನಿರ್ಮಿಸಿಕೊಂಡಿರುವ ಅನಧಿಕೃತ ಮನೆಗಳನ್ನು ಬೇರೆ ಕಡೆ ಸ್ಥಳಾಂತರಿಸುವ ಅಳತೆ ಕಾರ್ಯ ಪ್ರಗತಿಯಲ್ಲಿದ್ದು, ಸದರಿ ಅಳತೆ ಕಾರ್ಯ ಮುಕ್ತಾಯವಾದ ನಂತರ ಸದರಿ ಒತ್ತುವರಿದಾರರಿಗೆ ಮನೆ ನಿರ್ಮಿಸಲು ಮೇಲೆ ತಿಳಿಸಿರುವಂತೆ, 10 ಎಕರೆ ಜಾಗ ಮಂಜೂರಾದ ನಂತರ ಒತ್ತುವರಿ ಮಾಡಿದ ಜಾಗವನ್ನು ತೆರವುಗೊಳಿಸಲು ಅಗತ್ಯ ಕ್ರಮ ವಹಿಸಲಾಗುತ್ತದೆ. |

ಸಂಖ್ಯೆ: ಕಂಇ 12 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

ಅನುಬಂಧ-01

ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮೂದನೂರು ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಸ್ಥಾನದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಕ್ರಿಯಾ ಯೋಜನೆಯ ವಿವರ:-

| ಕ್ರ.ಸಂ | ಕ್ರಿಯಾ ಯೋಜನೆಗಳ (Action Plans) ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 01 | ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಹತ್ತಿರವಿರುವ ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿಗಾಗಿ | 25.17 |
| 02 | ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಹತ್ತಿರವಿರುವ 1) ಮಾರಲು ತೀರ್ಥ, 2) ಆಲೂ ತೀರ್ಥ, 3) ಸಕ್ಕರೆ ತೀರ್ಥ ಅಭಿವೃದ್ಧಿ ಕಾಮಗಾರಿಗಾಗಿ | 88.67 |
| 03 | ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ 1) ರಾಮ ತೀರ್ಥ, 2) ಪಾಂಡು ತೀರ್ಥ, 3) ಸಂಗಮ ತೀರ್ಥ ಅಭಿವೃದ್ಧಿ ಕಾಮಗಾರಿಗಾಗಿ | 95.17 |
| 04 | ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಆವರಣದಲ್ಲಿ ಶೌಚಾಲಯ ನಿರ್ಮಿಸುವ ಕಾಮಗಾರಿಗಾಗಿ | 23.80 |
| 05 | ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ವಸ್ತು ಸಂಗ್ರಹಾಲಯ ನಿರ್ಮಿಸುವ ಕಾಮಗಾರಿಗಾಗಿ | 71.70 |
| | ಒಟ್ಟು ಮೊತ್ತ ರೂ. | **304.51 ಲಕ್ಷ** |

6/2/24

Addl. Deputy Commissioner
Yadgiri

Scanned with OKEN Scanner

ಅನುಬಂಧ - 01

❖ ಪೂರ್ಣಗೊಳಿಸಿರುವ ಕಾಮಗಾರಿಗಳ ವಿವರ ಹಾಗೂ ಹಂಚಿಕೆಯಾದ ಮೊತ್ತ ರೂ. ಲಕ್ಷಗಳಲ್ಲಿ

1. ಪಾಂಡು ತೀರ್ಥ ಕಾಮಗಾರಿ – 45.00 ಲಕ್ಷ
2. ದೇವಸ್ಥಾನದ ವೆಲ್ ಕಮ್ ಆರ್ಚ ನಿರ್ಮಾಣ ಕಾಮಗಾರಿ – 06.50 ಲಕ್ಷ
3. ಆಲೂ ತೀರ್ಥ ಅಭಿವೃದ್ಧಿ ಕಾಮಗಾರಿ – 18.20 ಲಕ್ಷ
4. ಸಕ್ಕರೆ ತೀರ್ಥದ ಹಂತ 3 ಕಾಮಗಾರಿ – 13.00 ಲಕ್ಷ

❖ ಪೂರ್ಣಗೊಳಿಸದೆ ಬಾಕಿ ಉಳಿದಿರುವ ಕಾಮಗಾರಿಗಳ ವಿವರ ಹಾಗೂ ಹಂಚಿಕೆಯಾದ ಮೊತ್ತ ರೂ. ಲಕ್ಷಗಳಲ್ಲಿ

1. ಮಾರಲು ತೀರ್ಥ ಅಭಿವೃದ್ಧಿ ಕಾಮಗಾರಿ – 34.85 ಲಕ್ಷ
   (ಕಾಮಗಾರಿ ಕೈಗೊಂಡ ಮೊತ್ತ ರೂ.03.50 ಲಕ್ಷ)
2. ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿ – 25.17 ಲಕ್ಷ
   (ಕಾಮಗಾರಿ ಕೈಗೊಂಡ ಮೊತ್ತ ರೂ.02.80 ಲಕ್ಷ)
3. ದೇವಸ್ಥಾನದ ಆವರಣದಲ್ಲಿ ಶೌಚಾಲಯ ಕಾಮಗಾರಿ – 23.80 ಲಕ್ಷ
   (ನಿವೇಶನದ ಸಮಸ್ಯೆ)
4. ದೇವಸ್ಥಾನದ ವಸ್ತು ಸಂಗ್ರಾಹಲಯ ನಿರ್ಮಾಣ ಕಾಮಗಾರಿ – 71.70 ಲಕ್ಷ
   (ನಿವೇಶನದ ಸಮಸ್ಯೆ)
5. ರಾಮ ತೀರ್ಥ ಅಭಿವೃದ್ಧಿ ಕಾಮಗಾರಿ – 43.83 ಲಕ್ಷ
   (ಸದರಿ ಕಾಮಗಾರಿಯು ಪುರಾತತ್ವ ಇಲಾಖೆಯಿಂದ ಕೈಗೊಳ್ಳಲಾಗಿರುತ್ತದೆ.)
6. ಸಂಗಮ ತೀರ್ಥ ಅಭಿವೃದ್ಧಿ ಕಾಮಗಾರಿ – 22.42 ಲಕ್ಷ
   (ಸದರಿ ಕಾಮಗಾರಿಯು ಜಾಗದಲ್ಲಿ ಮನೆಗಳು ನಿರ್ಮಾಣವಾಗಿರುತ್ತದೆ)

/2/24

Addl. Deputy Commissioner
Yadgiri

Scanned with OKEN Scanner

**ದಿನಾಂಕ: 13-07-2022 ರಂದು ಮಧ್ಯಾಹ್ನ 03.30 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಹುಣಸಗಿ ತಾಲ್ಲೂಕಿನ ಮುದನೂರ ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯ ಕುರಿತು ಜರುಗಿಸಿದ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-

1. ಶ್ರೀಮತಿ ಸ್ನೇಹಲ್.ಆರ್ ಭಾ.ಆ.ಸೇ. ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ
2. ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ
3. ಸಹಾಯಕ ಆಯುಕ್ತರು, ಯಾದಗಿರಿ
4. ತಹಶೀಲ್ದಾರರು, ಸುರಪೂರ/ಹುಣಸಗಿ
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಯಾದಗಿರಿ
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಉಪ-ವಿಭಾಗ ಶಹಾಪೂರ
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ-ವಿಭಾಗ ಸುರಪೂರ.
8. ಮುಜರಾಯಿ ತಹಶೀಲ್ದಾರರು ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ.
9. ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರು ಹುಣಸಗಿ ತಾಲ್ಲೂಕು

(((0)))

ಪ್ರಾರಂಭದಲ್ಲಿ ಶ್ರೀ ದೇವರ ದಾಸಿಮಯ್ಯ ಮುದನೂರು ಗ್ರಾಮ, ಹುಣಸಗಿ ತಾಲ್ಲೂಕು ಸದರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯ ಕುರಿತಂತೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿವರ್ಗದವರಿಗೂ ಮತ್ತು ಸದರಿ ದೇವಸ್ಥಾನ ಸಮಿತಿಯ ಮಾಜಿ ಉಪಾಧ್ಯಕ್ಷರು ಹಾಗೂ ಇತರೆ ಸದಸ್ಯರು ಇವರಿಗೆ ಮುಜರಾಯಿ ಸಂಕಲನದ ವತಿಯಿಂದ ಸ್ವಾಗತಿಸಲಾಯಿತು. ಅದರಂತೆ ಸದರಿ ಸಭೆಯ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಯಾದಗಿರಿ ಇವರಿಗೆ ಸಭೆಯ ಅಧ್ಯಕ್ಷತೆ ವಹಿಸಿ ನಂತರ ಸಭೆಯಲ್ಲಿ ಉಪಸ್ಥಿತರಿರುವ ಎಲ್ಲರನ್ನು ಪರಿಚಯ ಮಾಡಿಕೊಂಡರು.

ಶ್ರೀ ದೇವರ ದಾಸಿಮಯ್ಯ ದೇವಸ್ಥಾನಕ್ಕೆ 2011-12ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಕಂಇ 99 ಮುಅಬಿ 2011, ಬೆಂಗಳೂರು ದಿ:17.05.2011ರ ಮೂಲಕ ಶ್ರೀ ದೇವರ ದಾಸಿಮಯ್ಯ ಜನ್ಮಸ್ಥಳ ಮುದನೂರು ಗ್ರಾಮ, ಹುಣಸಗಿ ತಾಲ್ಲೂಕು ಸಮಗ್ರ ಅಭಿವೃದ್ಧಿಗಾಗಿ ರೂ.500.00 ಲಕ್ಷಗಳಲ್ಲಿ ಪ್ರಥಮ ಹಂತವಾಗಿ ರೂ.300.00 ಲಕ್ಷ ಬಿಡುಗಡೆಗೊಳಿಸಿ ಆದೇಶಿಸಿರುತ್ತಾರೆ. ಆದರೆ ಸದರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ವಿಳಂಬವಾಗಿರುವ ಕುರಿತಂತೆ ಹಾಗೂ ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳು ಪೂರ್ಣಗೊಳಿಸಿದ ಮತ್ತು ಪೂರ್ಣಗೊಳಿಸದೇ ಇರುವ ಕಾಮಗಾರಿಗಳ ಕುರಿತು ಸ್ಪಷ್ಟ ಕಾರಣದೊಂದಿಗೆ ಸಂಬಂಧಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ಸಭಾಧ್ಯಕ್ಷರು ಚರ್ಚಿಸಿದರು. ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ದೇವಸ್ಥಾನದ ಸಮಿತಿಯ ಮಾಜಿ ಸದಸ್ಯರೊಬ್ಬರು ದೇವಸ್ಥಾನವು ಐತಿಹಾಸಿಕ ಪ್ರಸಿದ್ಧವುಳ್ಳ ಪ್ರೇಕ್ಷಣೀಯ ಸ್ಥಳವಾಗಿದ್ದು, ಸದರಿ ಗ್ರಾಮದಲ್ಲಿ ಈ ಕೆಳಕಾಣಿಸಿದ ಕಾಮಗಾರಿಗಳ ಪೈಕಿ ಇಲ್ಲಿಯವರೆಗೆ ಪೂರ್ಣಗೊಳಿಸಿರುವ ಹಾಗೂ ಪೂರ್ಣಗೊಳಿಸದೆ ವಿವಿಧ ಕಾರಣಗಳಿಂದ ತಡೆದಿರುವ ಕಾಮಗಾರಿಗಳ ಕುರಿತು ಸೂಕ್ತ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಜರುಗಿಸುವಂತೆ ಸಭಾಧ್ಯಕ್ಷರಿಗೆ ಕೋರಿದರು.

❖ ಪೂರ್ಣಗೊಳಿಸಿರುವ ಕಾಮಗಾರಿಗಳು ಹಾಗೂ ಮೊತ್ತ ರೂ. ಲಕ್ಷಗಳಲ್ಲಿ

1. ಪಾಂಡು ತೀರ್ಥ ಕಾಮಗಾರಿ – 45.00 ಲಕ್ಷ
2. ದೇವಸ್ಥಾನದ ವೆಲ್ ಕಮ್ ಆರ್ಚ ನಿರ್ಮಾಣ ಕಾಮಗಾರಿ – 06.50 ಲಕ್ಷ
3. ಆಲೂ ತೀರ್ಥ ಅಭಿವೃದ್ಧಿ ಕಾಮಗಾರಿ – 18.20 ಲಕ್ಷ
4. ಸಕ್ಕರೆ ತೀರ್ಥದ ಹಂತ 3 ಕಾಮಗಾರಿ – 13.00 ಲಕ್ಷ

ಮುಂದುವರೆದಿದೆ ಪುಟ-2ಕ್ಕೆ)

Scanned with OKEN Scanner

❖ ಪೂರ್ಣಗೊಳಿಸದೆ ಬಾಕಿ ಉಳಿದಿರುವ ಕಾಮಗಾರಿಗಳು ಹಾಗೂ ಮೊತ್ತ ರೂ. ಲಕ್ಷಗಳಲ್ಲಿ

1. ಮಾರಲು ತೀರ್ಥ ಅಭಿವೃದ್ಧಿ ಕಾಮಗಾರಿ – 34.85 ಲಕ್ಷ
   (ಕಾಮಗಾರಿ ಕೈಗೊಂಡ ಮೊತ್ತ ರೂ.03.50 ಲಕ್ಷ)
2. ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿ – 25.17 ಲಕ್ಷ
   (ಕಾಮಗಾರಿ ಕೈಗೊಂಡ ಮೊತ್ತ ರೂ.02.80 ಲಕ್ಷ)
3. ದೇವಸ್ಥಾನದ ಆವರಣದಲ್ಲಿ ಶೌಚಾಲಯ ಕಾಮಗಾರಿ – 23.80 ಲಕ್ಷ
   (ನಿವೇಶನ ಸಮಸ್ಯೆ)
4. ದೇವಸ್ಥಾನದ ವಸ್ತು ಸಂಗ್ರಾಹಲಯ ನಿರ್ಮಾಣ ಕಾಮಗಾರಿ – 71.70 ಲಕ್ಷ
   (ನಿವೇಶನ ಸಮಸ್ಯೆ)
5. ರಾಮ ತೀರ್ಥ ಅಭಿವೃದ್ಧಿ ಕಾಮಗಾರಿ – 43.83 ಲಕ್ಷ
   (ಸದರಿ ಕಾಮಗಾರಿಯು ಪುರಾತತ್ವ ಇಲಾಖೆಯಿಂದ ಕೈಗೊಳ್ಳಲಾಗಿರುತ್ತದೆ.)
6. ಸಂಗಮ ತೀರ್ಥ ಅಭಿವೃದ್ಧಿ ಕಾಮಗಾರಿ – 22.42 ಲಕ್ಷ
   (ಸದರಿ ಕಾಮಗಾರಿಯ ಕುರಿತಂತೆ ಮನೆ ನಿರ್ಮಾಣವಾಗಿರುತ್ತದೆ)

ಮುಂದುವರೆದು, ಈ ಮೇಲ್ಕಾಣಿಸಿದ ಕಾಮಗಾರಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ನಿಯಾಮಾನುಸಾರ ವಿನಿಯೋಗಿಸಿಕೊಂಡು ಹಣ ಬಳಕೆ ಪ್ರಮಾಣ ಪತ್ರ ಮತ್ತು ಇತರ ಅಗತ್ಯ ದಾಖಲೆಗಳೊಂದಿಗೆ ವರದಿ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ ಇಲ್ಲಿಯವರೆಗೆ ಪೂರ್ಣಗೊಳಿಸಿರುವ ಹಾಗೂ ಪೂರ್ಣಗೊಳಿಸದೆ ಉಳಿಸಿದ ಅಭಿವೃದ್ಧಿ ಕಾಮಗಾರಿಗಳ 3ನೇ ತಂಡದ ತಪಾಸಣಾ ವರದಿ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಸಭೆಯ ಸಭಾಧ್ಯಕ್ಷರು ಸೂಚಿಸಿದರು.

ಕಾಮಗಾರಿಗಳ ಕುರಿತಂತೆ ಸದರಿ ದೇವಸ್ಥಾನದ ಮಾಜಿ ಉಪಾಧ್ಯಕ್ಷರಾದ ಶ್ರೀ ರಾಮನಾಥ ರೆಡ್ಡಿ ಇವರು ಸಭೆಯಲ್ಲಿ ಮಾತನಾಡುತ್ತಾ, ದೇವಸ್ಥಾನದ ಕಾಮಗಾರಿಗಳು ಕಳಪೆ ಮಟ್ಟದ್ದಾಗಿರುತ್ತದೆ ಹಾಗೂ ಕಾಮಗಾರಿಗಳ ಅಂದಾಜು ಮೊತ್ತವನ್ನು ಪರಿಷ್ಕರಿಸಿ ಕಾಮಗಾರಿಯನ್ನು ಕೈಗೊಂಡಿರುತ್ತಾರೆಂದು ತಿಳಿಸಿ ಹಾಗೂ ಈ ಹಿಂದೆ ಸನ್ಮಾನ್ಯ ಶ್ರೀ ಯಡಿಯೂರಪ್ಪ ಮಾನ್ಯ ಮಾಜಿ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರು ಸದರಿ ದೇವಸ್ಥಾನಕ್ಕೆ ಸ್ಮಾರಕ ಭವನ ನಿರ್ಮಾಣ ಮಾಡಲು ರೂ.100.00 ಲಕ್ಷ ಅನುದಾನವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಬಿಡುಗಡೆಗೊಳಿಸಿರುತ್ತಾರೆ ಆದರೆ ಸದರಿ ಅನುದಾನಕ್ಕೆ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲವೆಂದು ತಿಳಿಸಿ, ಸದರಿ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ನೀಡುವಂತೆ ಮಾಹಿತಿ ಹಕ್ಕು ಅಧಿನಿಯಮದಡಿ ಪತ್ರ ಬರೆದಿರುತ್ತೇನೆ ಆದರೆ ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಂದ ಸ್ಪಷ್ಟವಾದ ಮಾಹಿತಿ ಬಂದಿರುವುದಿಲ್ಲವೆಂದು ಸಭೆಯ ಸಭಾಧ್ಯಕ್ಷರ ಗಮನಕ್ಕೆ ತಂದರು.

ತದನಂತರ, ಸಭಾಧ್ಯಕ್ಷರು ಮಾತನಾಡುತ್ತಾ, ಸದರಿ ವಿಷಯದ ಕುರಿತು ವಿವರವಾದ ಮಾಹಿತಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪಡೆದು, ದೇವಸ್ಥಾನದ ಸ್ಮಾರಕ ಭವನ ನಿರ್ಮಾಣಕ್ಕಾಗಿ ಒಟ್ಟು ರೂ.100.00 ಲಕ್ಷಗಳ ಪೈಕಿ ಅನುಷ್ಠಾನಾಧಿಕಾರಿಗಳಾದ ಕಾರ್ಯನಿರ್ವಾಹಕ ಅಭಿಯಂತರರು ಕೆ.ಆರ್.ಐ.ಡಿ.ಎಲ್ ಇವರಿಗೆ ರೂ.50.00 ಲಕ್ಷ ಅನುದಾನ ಬಿಡುಗಡೆಗೊಳಿಸಿದ್ದು, ಅದರಂತೆ ಅಂದಾಜು ಪಟ್ಟಿಯ ಮೊತ್ತ ರೂ.99.925 ಲಕ್ಷಗಳಾಗಿದ್ದು, ರೂ.50.00 ಲಕ್ಷಗಳ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ಉಳಿದ ರೂ.50.00 ಲಕ್ಷಗಳ ಅನುದಾನ ಸರ್ಕಾರದಿಂದ ಮಂಜೂರಿಗಾಗಿ ಉಪನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಕೂಡಲೇ ಬಾಕಿ ಮೊತ್ತಕ್ಕೆ ಅತೀ ಜರೂರಾಗಿ ಪತ್ರ ಬರೆಯಲು ಸಭಾಧ್ಯಕ್ಷರು ಸೂಚಿಸಿದರು. ಹಾಗೂ ಸಭೆಯಲ್ಲಿ ಹಾಜರಿದ್ದ ಶ್ರೀ ರಾಮನಾಥ ರೆಡ್ಡಿ ಇವರಿಗೆ ಅನಾವಶ್ಯಕವಾಗಿ ದೇವಸ್ಥಾನದ ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರೀತಿಯ ತೊಂದರೆಕೊಡಬಾರದೆಂದು ಸಭೆಯ ಸಭಾಧ್ಯಕ್ಷರು ಸೂಚಿಸುತ್ತಾ, ಮಾನ್ಯ ಸರ್ಕಾರದ ಆದೇಶದನ್ವಯ ಬಿಡುಗಡೆಯಾದ ರೂ.300.00 ಲಕ್ಷಗಳ ಪೈಕಿ ಈಗಾಗಲೇ ಈ ಕಛೇರಿಯಿಂದ ರೂ.150.00 ಲಕ್ಷಗಳು ಬಿಡುಗಡೆಯಾಗಿದ್ದು, ನಿಯಾಮಾನುಸಾರ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಬೇಕೆಂದು ಮತ್ತು ಸದರಿ ಬಾಕಿ ಉಳಿದ ಕಾಮಗಾರಿಗಳು ಕೈಗೊಳ್ಳಲು ಇನ್ನೂ ವಿಳಂಬ ಮಾಡಿದ್ದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಸಭೆಯಲ್ಲಿ ಉಪಸ್ಥಿತರಿದ್ದ ಅನುಷ್ಠಾನಾಧಿಕಾರಿಗಳಿಗೆ ತಿಳಿಸಿದರು.

ಮುಂದುವರೆದಿದೆ ಪುಟ-3ಕ್ಕೆ)

Scanned with OKEN Scanner

ಸದರಿ ಮೂದನೂರು ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಮಾಜಿ ಸದಸ್ಯರೊಬ್ಬರು ಮಾತನಾಡುತ್ತಾ, ಈಗಾಗಲೇ ನಿವೇಶನ ಸಮಸ್ಯೆ ಇರುವ ಶೌಚಾಲಯದ ನಿರ್ಮಾಣ ಹಾಗೂ ವಸ್ತು ಸಂಗ್ರಾಹಲಯ ಕಾಮಗಾರಿಗಳು ಹಾಗೇ ಉಳಿದಿದ್ದು, ಮತ್ತು ಬಾಕಿ ಇರುವ ಎಲ್ಲಾ ಅನುದಾನವನ್ನು ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿಗೆ ನೀಡಬೇಕೆಂದು ಸದರಿ ಕಾಮಗಾರಿಗೆ ಅಂದಾಜು ರೂ.200.00 ಲಕ್ಷಗಳ ಮೇಲ್ಪಟ್ಟಾಗುತ್ತದೆಂದು ತಿಳಿಸಿ ಸದರಿ ಕಾಮಗಾರಿ ಕೈಗೊಳ್ಳಲು ಈಗಾಗಲೇ ಈ ಹಿಂದೆ ದಿನಾಂಕ:10.02.2021ರಂದು ಸದರಿ ಗ್ರಾಮದ ಎಲ್ಲಾ ಸಾರ್ವಜನಿಕರು ಹಾಗೂ ದೇವಸ್ಥಾನದ ಸಮಿತಿಯ ಮಾಜಿ ಸದಸ್ಯರೊಂದಿಗೆ ತಹಶೀಲ್ದಾರರು ಹುಣಸಗಿರವರು ಸಭೆ ಜರುಗಿಸಲಾಗಿದ್ದು, ಅದರಂತೆ ಎಲ್ಲರ ಒಪ್ಪಿಗೆ ಮೇರೆಗೆ ಪೂರ್ಣಗೊಳಿಸದೆ ಬಾಕಿ ಉಳಿದ ಕಾಮಗಾರಿ ಬದಲಾವಣೆ ಮಾಡಿ ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿಗೆ ಎಲ್ಲಾ ಅನುದಾನ ವರ್ಗಾಯಿಸಿ ಕಾಮಗಾರಿ ಕೈಗೊಳ್ಳುವ ಸಂಬಂಧ ತಹಶೀಲ್ದಾರರು ಹುಣಸಗಿ ಇವರು ಜರುಗಿಸಿದ ಸಭೆಯ ನಡವಳಿಯಂತೆ ಸದರಿ ಲಕ್ಷ್ಮಣ ತೀರ್ಥ ಕಾಮಗಾರಿ ಕೈಗೊಳ್ಳಬೇಕೆಂದು ಸಭೆಯ ಸಭಾಧ್ಯಕ್ಷರಿಗೆ ವಿನಂತಿಸಿಕೊಳ್ಳುತ್ತಾರೆ. ಸದರಿ ವಿಚಾರವಾಗಿ ಸಭೆಯ ಸಭಾಧ್ಯಕ್ಷರು ಮಾತನಾಡುತ್ತಾ, ಕಾಮಗಾರಿಯ ಬದಲಾವಣೆಗೆ ಸಂಬಂಧಿಸಿದಂತೆ ಪರಿಶೀಲನೆ ಮಾಡಲಾಗುವುದೆಂದು ತಿಳಿಸಿ, ಸದರಿ ಕಾಮಗಾರಿಯನ್ನು ಜಲಜೀವನ ಅಭಿಯಾನದಡಿಯಲ್ಲಿ ಕಾಮಗಾರಿ ಕೈಗೊಳ್ಳಬಹುದಾಗಿರುತ್ತದೆಂದು ಸಭೆಯಲ್ಲಿ ಚರ್ಚಿಸಲಾಯಿತು. ಮತ್ತು ಈಗಾಗಲೇ ನಿವೇಶನ ಸಮಸ್ಯೆ ಇರುವ ಕಾಮಗಾರಿಗಳ ಕುರಿತಂತೆ ಸದರಿ ಗ್ರಾಮದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಪರವಾನಿಗೆ ಪಡೆದು ಸಲ್ಲಿಸಲು ಮತ್ತು ಕಾಮಗಾರಿ ಕೈಗೊಳ್ಳಲು ಆಕ್ಷೇಪಣೆ ಇಲ್ಲದೇ ಇರುವ ದೃಢೀಕರಣ ಪಡೆದು ಸಲ್ಲಿಸಿದ್ದಲ್ಲಿ, ಶೌಚಾಲಯದ ಕಾಮಗಾರಿ ಹಾಗೂ ವಸ್ತು ಸಂಗ್ರಾಹಲಯದ ಕಾಮಗಾರಿ ಕೈಗೊಳ್ಳಲಾಗುವುದೆಂದು ಸಭೆಯ ಸಭಾಧ್ಯಕ್ಷರು ತಿಳಿಸಿದರು.

ತದನಂತರ ಸಭೆಯ ಸಭಾಧ್ಯಕ್ಷರು ಮಾತನಾಡುತ್ತಾ, ಸದರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳು ನಿಯಮಾನುಸಾರ ಮುಂದುವರೆಸಿ ಕಾಮಗಾರಿ ಪೂರ್ಣಗೊಳಿಸುವಂತೆ ಹಾಗೂ ಅನುಷ್ಠಾನಾಧಿಕಾರಿಗಳಿಗೆ ಈ ಕಾರ್ಯಾಲಯದಿಂದ ಬಿಡುಗಡೆ ಮಾಡಿದ ರೂ.150.00 ಲಕ್ಷಗಳ ಪೈಕಿ ರೂ.89.00ಲಕ್ಷಕ್ಕೆ ಸಲ್ಲಿಸಿದ್ದು, ಇನ್ನುಳಿದ 61.00 ಲಕ್ಷ ಇದುವರೆಗೂ ವಿನಿಯೋಗಿಸಿಕೊಳ್ಳದೇ ಇರುವ ಮೊತ್ತಕ್ಕೆ 2011 ರಿಂದ ಇಲ್ಲಿಯವರೆಗೆ ಸಂಗ್ರಹವಾದ ಬಡ್ಡಿ ಮೊತ್ತವನ್ನು ನಿಯಮಾನುಸಾರ ಸರ್ಕಾರಕ್ಕೆ ಹಿಂದಿರುಗಿಸಬೇಕಾಗಿರುತ್ತದೆಂದು ಮತ್ತು ಈಗಾಗಲೇ ಸರ್ಕಾರದ ಆದೇಶದನ್ವಯ ಮೂದನೂರು ಗ್ರಾಮದ ಶ್ರೀ ದೇವರದಾಸಿಮಯ್ಯ ದೇವಸ್ಥಾನದ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನಕ್ಕೆ ಮಾತ್ರ ಯಾವುದೇ ರೀತಿಯ ವಿಳಂಬ ಮಾಡದೇ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ತಿಳಿಸಿ ಒಂದು ವೇಳೆ ಈ ಹಿಂದೆ ಇರುವ ಅಂದಾಜು ಪಟ್ಟಿಯಂತೆ ಕಾಮಗಾರಿ ಕೈಗೊಳ್ಳಬೇಕೆಂದು ಮತ್ತು ಇದನ್ನು ಹೊರತುಪಡಿಸಿ ಸದರಿ ಕಾಮಗಾರಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಅವಕಾಶ ನೀಡುವುದಿಲ್ಲವೆಂದು ಸಭಾಧ್ಯಕ್ಷರು ಸಭೆಯಲ್ಲಿ ಉಪಸ್ಥಿತರಿದ್ದ ಅನುಷ್ಠಾನಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು. ಹಾಗೂ ಸದರಿ ದೇವಸ್ಥಾನದ ಮಾಜಿ ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ದೇವಸ್ಥಾನಕ್ಕೆ ಕಾಮಗಾರಿಗಾಗಿ ಬಿಡುಗಡೆಯಾದ ಅನುದಾನವನ್ನು ಸರ್ಕಾರದ ನಿಯಮಾವಳಿಯನ್ವಯ ಕಾಮಗಾರಿ ಮಾಡಬೇಕಾಗಿದ್ದು,ಎಲ್ಲರ ಸಹಕಾರ ಅವಶ್ಯಕವಾಗಿರುತ್ತದೆ ಮತ್ತು ದೇವಸ್ಥಾನದ ಅಭಿವೃದ್ಧಿ ಹಿತ-ರಕ್ಷಣೆಗಾಗಿ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಅನಾವಶ್ಯಕವಾಗಿ ತೊಂದರೆ ನೀಡಿದ್ದಲ್ಲಿ ಕಾನೂನು ರೀತಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಸಭಾಧ್ಯಕ್ಷರು ತಿಳಿಸಿದರು.

ಮಾನ್ಯ ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ:4422ರ ಬಗ್ಗೆ ಚರ್ಚಿಸಲಾಗಿ ಈ ಮೊದಲು ಹುಣಸಗಿ ತಾಲ್ಲೂಕಿನ ಮುದನೂರು ಗ್ರಾಮದ ದೇವರ ದಾಸಿಮಯ್ಯ ಸ್ಥಳದಲ್ಲಿನ ಸರ್ವೆ ನಂ.183/ಅ ವಿಸ್ತೀರ್ಣ 10.00 ಎಕರೆ ಸರ್ಕಾರಿ ಜಮೀನಿನಲ್ಲಿ 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಒದಗಿಸಲು ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಲು ಮಾನ್ಯ ಸರ್ಕಾರ ಸೂಚಿಸಿರುವಂತೆ, ಸದರಿ ವಿಚಾರವಾಗಿ ತಹಶೀಲ್ದಾರರು ಹುಣಸಗಿ ಇವರ ವರದಿಯಾನುಸಾರ ಸರ್ವೆ ನಂ:183/ಅ ರದ್ದಪಡಿಸಿ ಹೊಸದಾಗಿ ಸರ್ವೆ ನಂ:239/2 ರಲ್ಲಿ ವಿಸ್ತೀರ್ಣ 31 ಎಕರೆ 18 ಗುಂಟೆ ಖಾರಿಜ-ಖಾತಾ ಜಮೀನಿದ್ದು, ಇದರಲ್ಲಿ 10.00 ಎಕರೆ ಜಮೀನು ಪುನರ್ ವಸತಿ ಕಲ್ಪಿಸಲು ಕಾಯ್ದಿರಿಸಿದೆ ಎಂದು ವರದಿ ಸಲ್ಲಿಸಿದಂತೆ ಅದರಂತೆ ನಿಯಮಾನುಸಾರ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಲು ತಹಶೀಲ್ದಾರರು ಹುಣಸಗಿ ಇವರಿಗೆ ಸಭೆಯ ಸಭಾಧ್ಯಕ್ಷರು ಸೂಚಿಸಿದರು. ಹಾಗೂ ಸದರಿ ಗ್ರಾಮದಲ್ಲಿ ಸರ್ಕಾರಿ ಜಮೀನುಗಳನ್ನು ಅತಿಕ್ರಮಣವಾಗಿರುವ ಕುರಿತು ಪರಿಶೀಲನೆ ನಡೆಸಿ ಗ್ರಾಮ ಪಂಚಾಯತಿಗೆ ಒಂದು ನೋಟೀಸ್ ಜಾರಿ ಮಾಡಿ ವರದಿ ಸಲ್ಲಿಸುವಂತೆ ಸಭಾಧ್ಯಕ್ಷರು ತಹಶೀಲ್ದಾರರು ಹುಣಸಗಿ ಇವರಿಗೆ ತಿಳಿಸಿದರು.

ಮುಂದುವರೆದಿದೆ ಪುಟ-4ಕ್ಕೆ)

ಸದರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ ಕುರಿತಂತೆ, ಇಲ್ಲಿಯವರೆಗೂ ಅನುಷ್ಠಾನಾಧಿಕಾರಿಗಳಿಂದ ಕೈಗೊಂಡ ಕಾಮಗಾರಿಗಳಿಗೆ ಈ ಕೂಡಲೇ 3ನೇ ತಂಡದ ತಪಾಸಣೆಗೆ ಒಳಪಡಿಸಿ, ನಿಯಮಾನುಸಾರ ಸೂಕ್ತವಾದ ವರದಿಯೊಂದಿಗೆ ಮುಂದಿನ ಕ್ರಮ ಜರುಗಿಸಲಾಗುವುದೆಂದು ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು.

ಅಂತಿಮವಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು ಮತ್ತು ಹುಣಸಗಿ ತಾಲ್ಲೂಕಿನ ಮುದನೂರು ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಮಾಜಿ ಸದಸ್ಯರುಗಳಿಗೆ ವಂದನೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು
ಯಾದಗಿರಿ ಜಿಲ್ಲೆ, ಯಾದಗಿರಿ

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಆದರಪೂರ್ವಕವಾಗಿ :-

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಮುಜರಾಯಿ ಇಲಾಖೆ) ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ,
2. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು-01 ರವರಿಗೆ,
3. ಮಾನ್ಯ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಚಾಮರಾಜಪೇಟೆ ಬೆಂಗಳೂರು-18 ರವರಿಗೆ

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :-

1. ಸಹಾಯಕ ಆಯುಕ್ತರು, ಯಾದಗಿರಿ
2. ತಹಶೀಲ್ದಾರರು,ಹುಣಸಗಿ / ಸುರಪೂರ
3. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ-ವಿಭಾಗ ಸುರಪೂರ
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ಯಾದಗಿರಿ
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ಉಪ-ವಿಭಾಗ ಶಹಾಪೂರ
6. ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ,( ತಹಶೀಲ್ದಾರರು ಹುಣಸಗಿ ಇವರ ಮುಖಾಂತರ)
7. ಈ ಕಛೇರಿ ಕಡತಕ್ಕೆ/ ಹೆಚ್ಚುವರಿ.

Scanned with OKEN Scanne

## ದಿನಾಂಕ: 20-01-2023 ರಂದು ಮಧ್ಯಾಹ್ನ 12.30 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಹುಣಸಗಿ ತಾಲ್ಲೂಕಿನ ಮುದನೂರ ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯ ಕುರಿತು ಜರುಗಿಸಿದ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ ಸ್ನೇಹಲ್.ಆರ್ ಭಾ.ಆ.ಸೇ. ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ
2. ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ
3. ಸಹಾಯಕ ಆಯುಕ್ತರು, ಯಾದಗಿರಿ
4. ಗ್ರೇಡ್-2 ತಹಶೀಲ್ದಾರರು, ಸುರಪೂರ/ಹುಣಸಗಿ
5. ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಯಾದಗಿರಿ
6. ಮುಜರಾಯಿ ಸಂಕಲನದ ಅಧೀಕ್ಷಕರು/ಸಿಬ್ಬಂದಿವರ್ಗದವರು ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ.
7. ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರು ಹುಣಸಗಿ ತಾಲ್ಲೂಕು

(((0)))

ಪ್ರಾರಂಭದಲ್ಲಿ ಶ್ರೀ ದೇವರ ದಾಸಿಮಯ್ಯ ಮುದನೂರು ಗ್ರಾಮ, ಹುಣಸಗಿ ತಾಲ್ಲೂಕು ಸದರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯ ಕುರಿತಂತೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿವರ್ಗದವರಿಗೂ ಮತ್ತು ಸದರಿ ದೇವಸ್ಥಾನ ಸಮಿತಿಯ ಮಾಜಿ ಉಪಾಧ್ಯಕ್ಷರು ಹಾಗೂ ಇತರೆ ಸದಸ್ಯರು ಇವರಿಗೆ ಮುಜರಾಯಿ ಸಂಕಲನದ ವತಿಯಿಂದ ಸ್ವಾಗತಿಸಲಾಯಿತು. ಅದರಂತೆ ಸದರಿ ಸಭೆಯ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಯಾದಗಿರಿ ಇವರಿಗೆ ಸಭೆಯ ಅಧ್ಯಕ್ಷತೆ ವಹಿಸಿ ನಂತರ ಸಭೆಯಲ್ಲಿ ಉಪಸ್ಥಿತರಿರುವ ಎಲ್ಲರನ್ನು ಪರಿಚಯ ಮಾಡಿಕೊಂಡರು.

ಶ್ರೀ ದೇವರ ದಾಸಿಮಯ್ಯ ದೇವಸ್ಥಾನಕ್ಕೆ 2011-12ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಕಂಇ 99 ಮುಅಬಿ 2011, ಬೆಂಗಳೂರು ದಿ:17.05.2011ರ ಮೂಲಕ ಶ್ರೀ ದೇವರ ದಾಸಿಮಯ್ಯ ಜನ್ಮಸ್ಥಳ ಮುದನೂರು ಗ್ರಾಮ, ಹುಣಸಗಿ ತಾಲ್ಲೂಕು ಸಮಗ್ರ ಅಭಿವೃದ್ಧಿಗಾಗಿ ರೂ.500.00 ಲಕ್ಷಗಳಲ್ಲಿ ಪ್ರಥಮ ಹಂತವಾಗಿ ರೂ.300.00 ಲಕ್ಷ ಬಿಡುಗಡೆಗೊಳಿಸಿ ಆದೇಶಿಸಿರುತ್ತಾರೆ. ಆದರೆ ಸದರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ವಿಳಂಬವಾಗಿರುವ ಕುರಿತಂತೆ ಹಾಗೂ ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳು ಪೂರ್ಣಗೊಳಿಸಿದ ಮತ್ತು ಪೂರ್ಣಗೊಳಿಸದೇ ಇರುವ ಕಾಮಗಾರಿಗಳ ಕುರಿತು ಸ್ಪಷ್ಟ ಕಾರಣದೊಂದಿಗೆ ಸಂಬಂಧಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ಸಭಾಧ್ಯಕ್ಷರು ಚರ್ಚಿಸಿದರು. ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ದೇವಸ್ಥಾನದ ಸಮಿತಿಯ ಮಾಜಿ ಸದಸ್ಯರೊಬ್ಬರು ದೇವಸ್ಥಾನವು ಐತಿಹಾಸಿಕ ಪ್ರಸಿದ್ಧವುಳ್ಳ ಪ್ರೇಕ್ಷಣೀಯ ಸ್ಥಳವಾಗಿದ್ದು, ಸದರಿ ಗ್ರಾಮದಲ್ಲಿ ಈ ಕೆಳಕಾಣಿಸಿದ ಕಾಮಗಾರಿಗಳ ಪೈಕಿ ಇಲ್ಲಿಯವರೆಗೆ ಪೂರ್ಣಗೊಳಿಸಿರುವ ಹಾಗೂ ಪೂರ್ಣಗೊಳಿಸದೆ ವಿವಿಧ ಕಾರಣಗಳಿಂದ ತಡೆದಿರುವ ಕಾಮಗಾರಿಗಳ ಕುರಿತು ಸೂಕ್ತ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಜರುಗಿಸುವಂತೆ ಸಭಾಧ್ಯಕ್ಷರಿಗೆ ಕೋರಿದರು.

❖ ಪೂರ್ಣಗೊಳಿಸಿರುವ ಕಾಮಗಾರಿಗಳು ಹಾಗೂ ಮೊತ್ತ ರೂ. ಲಕ್ಷಗಳಲ್ಲಿ

1. ಪಾಂಡು ತೀರ್ಥ ಕಾಮಗಾರಿ – 45.00 ಲಕ್ಷ
2. ದೇವಸ್ಥಾನದ ವೆಲ್ ಕಮ್ ಆರ್ಚ ನಿರ್ಮಾಣ ಕಾಮಗಾರಿ – 06.50 ಲಕ್ಷ
3. ಆಲೂ ತೀರ್ಥ ಅಭಿವೃದ್ಧಿ ಕಾಮಗಾರಿ – 18.20 ಲಕ್ಷ
4. ಸಕ್ಕರೆ ತೀರ್ಥದ ಹಂತ 3 ಕಾಮಗಾರಿ – 13.00 ಲಕ್ಷ

ಮುಂದುವರೆದಿದೆ ಪುಟ-2ಕ್ಕೆ)

2/11

❖ ಪೂರ್ಣಗೊಳಿಸದೆ ಬಾಕಿ ಉಳಿದಿರುವ ಕಾಮಗಾರಿಗಳು ಹಾಗೂ ಮೊತ್ತ ರೂ. ಲಕ್ಷಗಳಲ್ಲಿ

1. ಮಾರಲು ತೀರ್ಥ ಅಭಿವೃದ್ಧಿ ಕಾಮಗಾರಿ – 34.85 ಲಕ್ಷ
   (ಕಾಮಗಾರಿ ಕೈಗೊಂಡ ಮೊತ್ತ ರೂ.03.50 ಲಕ್ಷ)
2. ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿ – 25.17 ಲಕ್ಷ
   (ಕಾಮಗಾರಿ ಕೈಗೊಂಡ ಮೊತ್ತ ರೂ.02.80 ಲಕ್ಷ)
3. ದೇವಸ್ಥಾನದ ಆವರಣದಲ್ಲಿ ಶೌಚಾಲಯ ಕಾಮಗಾರಿ – 23.80 ಲಕ್ಷ
   (ನಿವೇಶನ ಸಮಸ್ಯೆ)
4. ದೇವಸ್ಥಾನದ ವಸ್ತು ಸಂಗ್ರಾಹಲಯ ನಿರ್ಮಾಣ ಕಾಮಗಾರಿ – 71.70 ಲಕ್ಷ
   (ನಿವೇಶನ ಸಮಸ್ಯೆ)
5. ರಾಮ ತೀರ್ಥ ಅಭಿವೃದ್ಧಿ ಕಾಮಗಾರಿ – 43.83 ಲಕ್ಷ
   (ಸದರಿ ಕಾಮಗಾರಿಯು ಪುರಾತತ್ವ ಇಲಾಖೆಯಿಂದ ಕೈಗೊಳ್ಳಲಾಗಿರುತ್ತದೆ.)
6. ಸಂಗಮ ತೀರ್ಥ ಅಭಿವೃದ್ಧಿ ಕಾಮಗಾರಿ – 22.42 ಲಕ್ಷ
   (ಸದರಿ ಕಾಮಗಾರಿಯ ಕುರಿತಂತೆ ಮನೆ ನಿರ್ಮಾಣವಾಗಿರುತ್ತದೆ)

ಮುಂದುವರೆದು, ಈ ಮೇಲ್ಕಾಣಿಸಿದ ಕಾಮಗಾರಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ನಿಯಾಮಾನುಸಾರ ವಿನೀಯೊಗಿಸಿಕೊಂಡು ಹಣ ಬಳಕೆ ಪ್ರಮಾಣ ಪತ್ರ ಮತ್ತು ಇತರೆ ಅಗತ್ಯ ದಾಖಲೆಗಳೊಂದಿಗೆ ವರದಿ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ ಇಲ್ಲಿಯವರೆಗೆ ಪೂರ್ಣಗೊಳಿಸಿರುವ ಅಭಿವೃದ್ಧಿ ಕಾಮಗಾರಿಗಳ 3ನೇ ತಂಡದ ತಪಾಸಣಾ ವರದಿ ಪಡೆಯಲಾಗಿದ್ದು, ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕೈಗೊಂಡಿರುವ ಕಲ್ಯಾಣ ಮಂಟಪದ 3ನೇ ತಂಡದ ತಪಾಸಣಾ ವರದಿ ಸ್ವೀಕೃತವಾಗಿದ್ದು, ಅನುಷ್ಠಾನಾಧಿಕಾರಿಗಳಾದ ಕೆ.ಆರ್.ಐ.ಡಿ.ಎಲ್ ರವರಿಗೆ ಕಾಮಗಾರಿಗೆ ಬಿಡುಗಡೆ ಮಾಡಲಾದ 01ನೇ ಕಂತಿನ ಅನುದಾನ ರೂ.150.00 ಲಕ್ಷಗಳ ಪೈಕಿ ರೂ.89.00 ಲಕ್ಷಗಳಿಗೆ ಸದರಿ ದೇವಸ್ಥಾನದ ಕಾಮಗಾರಿಗಳ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿದ್ದು, ಉಳಿದಂತೆ ರೂ.61.00 ಲಕ್ಷಗಳನ್ನು ಚೆಕ್ ಸಂಖ್ಯೆ:100677ನ್ನು ದಿನಾಂಕ:19/01/2023ರ ಮುಖಾಂತರ ಈ ಕಾರ್ಯಾಲಯಕ್ಕೆ ಹಿಂದಿರುಗಿಸಿರುತ್ತಾರೆ. ಸದರಿ ಅನುದಾನದ ಬಡ್ಡಿ ಮೊತ್ತವನ್ನು ನಿಯಾಮಾನುಸಾರ ಮಾನ್ಯ ಸರ್ಕಾರಕ್ಕೆ ಹಿಂದಿರುಗಿಸಲು ಸಭೆಯಲ್ಲಿ ಸಭಾಧ್ಯಕ್ಷರು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಗೆ ಸೂಚಿಸಿದರು. ಮುಂದುವರೆದು, ಇನ್ನೂ ಬಾಕಿ ಉಳಿದ ಕಾಮಗಾರಿಗಳ ಪೈಕಿ ಅವಶ್ಯಕ ಕಾಮಗಾರಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು.

ಕಾಮಗಾರಿಗಳ ಕುರಿತಂತೆ ಸದರಿ ದೇವಸ್ಥಾನದ ಮಾಜಿ ಸಮಿತಿ ಸದಸ್ಯರೊಬ್ಬರು ಮಾತನಾಡುತ್ತಾ, ಸದರಿ ದೇವಸ್ಥಾನದ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಹಾಗೂ ಯಾವುದೇ ಕಾರಣಕ್ಕೂ ಈ ಹಿಂದಿನ ಅನುಷ್ಠಾನಾಧಿಕಾರಿಗಳಾದ ಕೆ.ಆರ್.ಐ.ಡಿ.ಎಲ್ ರವರಿಗೆ ವಹಿಸಬಾರದೆಂದು ಕೋರಿದರು. ಕಾರಣ ಈಗಾಗಲೇ ಸುಮಾರು 10 ವರ್ಷಗಳಾದರೂ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇರುವ ಕುರಿತು ತುಂಬಾ ಬೇಸರ ವ್ಯಕ್ತಪಡಿಸಿದರು. ಹಾಗೂ ಸದರಿ ದೇವರ ದಾಸಿಮಯ್ಯನವರ ಜಯಂತಿಯು 2023ರ ಏಪ್ರೀಲ್ ತಿಂಗಳಿನಲ್ಲಿ ಇರುವುದರಿಂದ ಬಾಕಿ ಉಳಿದ ರೂ.211.00 ಲಕ್ಷಗಳಿಗೆ ಸಂಬಂಧಿಸಿದಂತೆ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳನ್ನು ಬೇರೆ ಏಜೆನ್ಸಿಯವರಿಂದ ಕೈಗೊಳ್ಳಲು ಸಭೆಯಲ್ಲಿ ಸದರಿ ದೇವಸ್ಥಾನದ ಮಾಜಿ ಸದಸ್ಯರು ಮತ್ತು ಗ್ರಾಮದ ಸ್ಥಳೀಯರೆಲ್ಲರೂ ಒಪ್ಪಿಗೆ ನೀಡಿ ಸಭಾಧ್ಯಕ್ಷರಿಗೆ ಮನವಿ ಮಾಡಿಕೊಂಡರು.

ತದನಂತರ, ಸಭಾಧ್ಯಕ್ಷರು ಮಾತನಾಡುತ್ತಾ, ಈ ಕಛೇರಿಯಲ್ಲಿ ಒಟ್ಟು ರೂ.211.00 ಲಕ್ಷಗಳ ಅನುದಾನ ಲಭ್ಯವಿದ್ದು, ಸದರಿ ದೇವಸ್ಥಾನದ ಬಾಕಿ ಉಳಿದ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ ಅನುದಾನ ಲಭ್ಯತೆಯ ಅನುಗುಣವಾಗಿ ಹೊಸದಾಗಿ ಅನುಷ್ಠಾನಾಧಿಕಾರಿಗಳಾದ ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಇವರಿಗೆ ವಹಿಸಲು ಸಭೆಯಲ್ಲಿ ಎಲ್ಲರ ಒಪ್ಪಿಗೆ ಮೇರೆಗೆ ತೀರ್ಮಾನಿಸಲಾಯಿತು. ಮುಂದುವರೆದು, ಬಾಕಿ ಉಳಿದ ಕಾಮಗಾರಿಗಳಾದ ವಿವರ ಈ ಕೆಳಕಂಡಂತಿರುತ್ತದೆ.

1) ದೇವಸ್ಥಾನದ ಆವರಣದಲ್ಲಿ ಶೌಚಾಲಯ ಕಾಮಗಾರಿ – 23.80 ಲಕ್ಷ
2) ದೇವಸ್ಥಾನದ ವಸ್ತು ಸಂಗ್ರಾಹಲಯ ನಿರ್ಮಾಣ ಕಾಮಗಾರಿ – 71.70 ಲಕ್ಷ
3) ಮಾರಲು ತೀರ್ಥ ಅಭಿವೃದ್ಧಿ ಕಾಮಗಾರಿ – 34.85 ಲಕ್ಷ
4) ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿ – 25.17 ಲಕ್ಷ

--3--

Scanned with OKEN Scanner

ಈ ಮೇಲಿನ ಕ್ರ.ಸಂ(1) ಮತ್ತು (2)ರ ಕಾಮಗಾರಿಗಳಲ್ಲಿ ನಿವೇಶನ ಸಮಸ್ಯೆ ಇರುವ ಪ್ರಯುಕ್ತ, ಈಗಾಗಲೇ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕೈಗೊಂಡಿರುವ ಕಲ್ಯಾಣ ಮಂಟಪದ ಕಾಮಗಾರಿಗೆ ಇನ್ನೂ ಅನುದಾನದ ಅವಶ್ಯಕತೆ ಇರುವ ಪ್ರಯುಕ್ತ, ಅನುದಾನ ಕೋರಿ ಮಾನ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ಸರ್ಕಾರದಿಂದ ಅನುದಾನ ಬಿಡುಗಡೆಗೆ ಬಾಕಿ ಇರುವ ಪ್ರಯುಕ್ತ, ಸದ್ಯ ಈ ಕಛೇರಿಯ ಮುಜರಾಯಿ ಶಾಖೆಯಲ್ಲಿ ಲಭ್ಯವಿರುವ ಅನುದಾನ ಹಾಗೂ ಹಿಂದಿನ ಅನುಷ್ಠಾನಾಧಿಕಾರಿಗಳಾದ ಕೆ.ಆರ್.ಐ.ಡಿ.ಎಲ್ ಇವರಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.150.00 ಲಕ್ಷಗಳ ಪೈಕಿ ರೂ.61.00 ಲಕ್ಷಗಳು ಬಾಕಿ ಉಳಿದಿರುವ ಅನುದಾನವನ್ನು ಈ ಕಛೇರಿಗೆ ನೀಡಿರುತ್ತಾರೆ.

ಅದರಂತೆ, ಒಟ್ಟು ರೂ.211.00 ಲಕ್ಷಗಳ ಅನುದಾನದ ಲಭ್ಯತೆಯ ಅನುಗುಣವಾಗಿ ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿಗಳ ಪೈಕಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕೈಗೊಂಡಿರುವ ಕಲ್ಯಾಣ ಮಂಟಪದ ಕಾಮಗಾರಿಯನ್ನು ಸಹ ಪೂರ್ಣಗೊಳಿಸಲು ಈ ಕಛೇರಿಯಿಂದ ಅನುದಾನ ಭರಿಸಿ ನಿಯಾಮಾನುಸಾರ ಬಾಕಿ ಇರುವ ಈ ಕೆಳಕಾಣಿಸಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಯಾದಗಿರಿ(ಅನುಷ್ಠಾನಾಧಿಕಾರಿಗಳು) ಇವರಿಗೆ ಸೂಚಿಸಲಾಯಿತು.

1) ಸದರಿ ದೇವಸ್ಥಾನದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕೈಗೊಂಡಿರುವ ಕಲ್ಯಾಣ ಮಂಟಪದಲ್ಲಿ ಶೌಚಾಲಯವನ್ನು ಅಳವಡಿಸುವ ಕಾಮಗಾರಿ ಹಾಗೂ ಕಲ್ಯಾಣ ಮಂಟಪದ ಕಾಮಗಾರಿಯನ್ನು ಸಹ ಈ ಶಾಖೆಯಲ್ಲಿ ಲಭ್ಯವಿರುವ ಅನುದಾನದಿಂದ ಪೂರ್ಣಗೊಳಿಸಲು ತಯಾರಿಸಬೇಕಾದ ಅಂದಾಜು ಪಟ್ಟಿ & ನಕ್ಷೆ,
2) ವಸ್ತು ಸಂಗ್ರಹಾಲಯದ ಅಭಿವೃದ್ಧಿ ಕಾಮಗಾರಿ (ಸ್ಥಳಾವಾಕಾಶವಿದ್ದಲ್ಲಿ ಮಾತ್ರ),
3) ಮಾರಲು ತೀರ್ಥ ಅಭಿವೃದ್ಧಿ ಕಾಮಗಾರಿ,
4) ಲಕ್ಷ್ಮಣ ತೀರ್ಥ ಅಭಿವೃದ್ಧಿ ಕಾಮಗಾರಿ,

ಈ ಮೇಲಿನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯಲ್ಲಿ ಎಲ್ಲರ ಒಪ್ಪಿಗೆ ಮೇರೆಗೆ ಚರ್ಚಿಸಿ ನಿರ್ಣಯಿಸಲಾಯಿತು. ಅದರಂತೆ, ಸದರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳನ್ನು ಅನುದಾನಕ್ಕನುಗುಣವಾಗಿ ಕೈಗೊಳ್ಳಲು ಅನುಷ್ಠಾನಾಧಿಕಾರಿಗಳಾದ ನಿರ್ಮಿತಿ ಕೇಂದ್ರ ಇವರ ಸಹಯೋಗದೊಂದಿಗೆ ಸ್ಥಳ ತನಿಖೆ ಕೈಗೊಂಡು ಅನುದಾನದ ಲಭ್ಯತೆಯ ಅನುಗುಣವಾಗಿ ಅಂದಾಜು ಪಟ್ಟಿ ತಯಾರಿಸಲು ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು ತ್ವರಿತವಾಗಿ ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲು ಸಹಾಯಕ ಆಯುಕ್ತರು, ಯಾದಗಿರಿ ಇವರಿಗೆ ಸಭಾಧ್ಯಕ್ಷರು ಸೂಚಿಸಿದರು.

**ಮಾನ್ಯ ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ:4422ರ** ಬಗ್ಗೆ ಚರ್ಚಿಸಲಾಗಿ ಈ ಮೊದಲು ಹುಣಸಗಿ ತಾಲ್ಲೂಕಿನ ಮುದನೂರು ಗ್ರಾಮದ ದೇವರ ದಾಸಿಮಯ್ಯ ಸ್ಥಳದಲ್ಲಿನ ಸರ್ವೇ ನಂ.183/ಅ ವಿಸ್ತೀರ್ಣ 10.00 ಎಕರೆ ಸರ್ಕಾರಿ ಜಮೀನಿನಲ್ಲಿ 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಒದಗಿಸಲು ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಲು ಮಾನ್ಯ ಸರ್ಕಾರ ಸೂಚಿಸಿರುವಂತೆ, ಸದರಿ ವಿಚಾರವಾಗಿ ತಹಶೀಲ್ದಾರರು ಹುಣಸಗಿ ಇವರ ವರದಿಯಾನುಸಾರ ಸರ್ವೇ ನಂ:183/ಅ ರದ್ದುಪಡಿಸಿ ಹೊಸದಾಗಿ ಸರ್ವೇ ನಂ:239/2 ರಲ್ಲಿ ವಿಸ್ತೀರ್ಣ 31 ಎಕರೆ 18 ಗುಂಟೆ ಖಾರಿಜ-ಖಾತಾ ಜಮೀನಿದ್ದು, ಇದರಲ್ಲಿ 10.00 ಎಕರೆ ಜಮೀನು ಪುನರ್ ವಸತಿ ಕಲ್ಪಿಸಲು ಕಾಯ್ದಿರಿಸಿದೆ ಎಂದು ವರದಿ ಸಲ್ಲಿಸಿದಂತೆ ಅದರಂತೆ ನಿಯಾಮಾನುಸಾರ ಪರಿಶೀಲಿಸಿ ಜಮೀನು ಮಂಜೂರಾತಿಗೆ ಸಂಬಂಧಿಸಿದಂತೆ ನಿಯಾಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು.

ಅಂತಿಮವಾಗಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು ಮತ್ತು ಹುಣಸಗಿ ತಾಲ್ಲೂಕಿನ ಮುದನೂರು ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಸ್ಥಾನದ ಮಾಜಿ ಸದಸ್ಯರುಗಳಿಗೆ ಮತ್ತು ದೇವಸ್ಥಾನದ ಹಿತೈಸಿಗಳಿಗೆ ವಂದನೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Rushal

**ಜಿಲ್ಲಾಧಿಕಾರಿಗಳು**

ಯಾದಗಿರಿ ಜಿಲ್ಲೆ, ಯಾದಗಿರಿ

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಆದರಪೂರ್ವಕವಾಗಿ :-**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಮುಜರಾಯಿ ಇಲಾಖೆ) ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ,
2. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು-01 ರವರಿಗೆ,
3. ಮಾನ್ಯ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಚಾಮರಾಜಪೇಟೆ ಬೆಂಗಳೂರು-18 ರವರಿಗೆ,

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :-**

1. ಸಹಾಯಕ ಆಯುಕ್ತರು, ಯಾದಗಿರಿ
2. ತಹಶೀಲ್ದಾರರು,ಹುಣಸಗಿ / ಸುರಪೂರ
3. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ಯಾದಗಿರಿ ಇವರಿಗೆ ಮಾಹಿತಿಗಾಗಿ,
4. ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಯಾದಗಿರಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸುತ್ತಾ, ಕೂಡಲೇ ಸ್ಥಳ ತನಿಖೆ ಕೈಗೊಂಡು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಿದೆ.
5. ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ,( ತಹಶೀಲ್ದಾರರು ಹುಣಸಗಿ ಇವರ ಮುಖಾಂತರ)
6. ಈ ಕಛೇರಿ ಕಡತಕ್ಕೆ/ ಹೆಚ್ಚುವರಿ.

Scanned with OKEN Scanner

ಕರ್ನಾಟಕ ಸರಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಜಿಲ್ಲೆ, ಯಾದಗಿರಿ-585202

OFFICE OF THE DEPUTY COMMISSIONER, YADGIR DISTRICT, YADGIR-585202

(ದೂರವಾಣಿ ಸಂಖ್ಯೆ: 08473-253700, ಫ್ಯಾಕ್ಸ್: 08473-253701)

ಸಂ/ಕಂ/ಭೂಮಂ/06/2023-24/E-97062

ದಿನಾಂಕ:19-01-2024

ಸ್ವೀಕೃತಿ
ದಿನಾಂಕ 23/1/24

ರವರಿಗೆ,

ಮಾನ್ಯ ಪ್ರಾದೇಶಿಕ ಆಯುಕ್ತರು

ಕಲಬುರಗಿ ವಿಭಾಗ ಕಲಬುರಗಿ.

ಮಾನ್ಯರೇ,

ವಿಷಯ:- ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಮುದನೂರು (ಬಿ) ಗ್ರಾಮದ ಸರ್ಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಕ್ಷೇತ್ರ 31-18 ಎಕರೆ/ ಗುಂಟೆ ಜಮೀನಿನಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ಮುದನೂರು (ಬಿ) ಗ್ರಾಮದ ಶ್ರೀ ದೇವರಾದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿ 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಜಮೀನನ್ನು ಮಂಜೂರಿಸುವ ಕುರಿತು.

ಉಲ್ಲೇಖ:
1 ಈ ಕಛೇರಿಯ ಪತ್ರ ಸಂಖ್ಯೆ/ಕಂ/ದೇವಸ್ಥಾನ/ಸಿಆರ್/90/2018-19 ದಿನಾಂಕ: 24-08-2022.
2 ತಹಸೀಲ್ದಾರರು, ಹುಣಸಗಿ ಇವರ ಪತ್ರ ಸಂ/ಕಂ/ಭೂಮಂ/ /2022-23 ದಿ: 16.09.2022
3 ಸಹಾಯಕ ಆಯುಕ್ತರು, ಯಾದಗಿರಿ ಇವರ ಪತ್ರ ಸಂ:ಕಂ/ಭೂಮಿ/161/2021-22 ದಿನಾಂಕ:17.10.2022.
4 ಈ ಕಾರ್ಯಾಲಯದ ಪತ್ರ ಸಮ ಸಂಖ್ಯೆ ದಿನಾಂಕ: 18-08-2023.
5 ಮಾನ್ಯ ಸರ್ಕಾರ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ/ಆರ್.ಡಿ/43/ಎಲ್.ಜಿ.ಜಿ/2023 ದಿನಾಂಕ: 09-10-2023

((0))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಹಸೀಲ್ದಾರರು, ಹುಣಸಗಿ ಇವರು ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ಶ್ರೀ ದೇವರಾದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿ ಆ ಭಾಗದ 160 ಮನೆಯವರಿಗೆ ಬೇರ ವಸತಿ ಜಾಗ ನೀಡುವ ಕುರಿತಂತೆ ಸರ್ವೆ ನಂ. 183/ಅ ರಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ಕಾಯ್ದಿರಿಸುವ ಕುರಿತು ಹಾಗೂ ಪ್ರಸ್ತುತ ಕಾಯ್ದಿರಿಸಿರುವುದನ್ನು ರದ್ದುಪಡಿಸಿ ಮತ್ತು ಇದರ ಬದಲಾಗಿ ಹೊಸದಾಗಿ ಗುರುತಿಸಿದ ಸರಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ಪುನರ್ವಸತಿಗಾಗಿ ಮಂಜೂರಿಸುವ ಕುರಿತು ಈ ಕೆಳಗಿನಂತೆ ವಿವರಣೆ ನೀಡಿರುತ್ತಾರೆ.

ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ಶ್ರೀ ದೇವರದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿನ ಸರ್ವೆ ನಂ. 183/ಅ ರಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಸರ್ಕಾರಿ ಜಮೀನಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ನಿರ್ಮಿಸಲಾಗಿದ್ದು, ಸದರಿ ಸರ್ವೆ ನಂಬರಿನಲ್ಲಿ ಮುಸ್ಲಿಂ ಸಮುದಾಯದ ಮಸೀದಿ/ ದರ್ಗಾಗಳು ಮತ್ತು ಮನೆಗಳು ನಿರ್ಮಾಣಗೊಂಡಿದ್ದು ಪ್ರಸ್ತುತ ಜಮೀನಿನಲ್ಲಿ 04-00 ಎಕರೆ/ ಗುಂಟೆ ಜಮೀನು ಮಾತ್ರ ಲಭ್ಯವಿರುತ್ತದೆಂದು ದಿನಾಂಕ: 23-08-2022 ರಂದು ಸದರಿ ಗ್ರಾಮದ ಸ್ಥಳ ತನಿಖೆ ಕೈಗೊಂಡು ತಾಲ್ಲೂಕಿನ ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಪಂಚನಾಮ ವರದಿಯಲ್ಲಿ ಪ್ರಸ್ತುತ ಹಂತದ

Scanned with OKEN Scanner

ಮಾಹಿತಿಯನ್ನು ಸಲ್ಲಿಸಿರುತ್ತಾರೆ. ಈ ಕಾರಣಗಳಿಂದಾಗಿ ಸದರಿ ಸರ್ವೆ ನಂ. 183/ಅ ರಲ್ಲಿ ಪುನರ್ವಸತಿಗಾಗಿ ಕಾಯ್ದಿರಿಸಿದ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ರದ್ದುಪಡಿಸಿ ಇದರ ಬದಲಾಗಿ ಹೊಸದಾಗಿ ಗುರುತಿಸಿದ ಸರ್ಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ಪುನರ್ವಸತಿಗಾಗಿ ಮಂಜೂರಿಸಲು ಯೋಗ್ಯವಿರುತ್ತದೆ ಎಂದು ತಿಳಿಸಿ ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ತಹಸೀಲ್ದಾರರು ನೀಡಿದ ವರದಿಯ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ 2244 ಗೆ ಉತ್ತರವನ್ನು ಈಗಾಗಲೇ ಉಲ್ಲೇಖಿತ (1) ರ ಪತ್ರದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಉಲ್ಲೇಖಿತ (2) ರ ಪತ್ರದ ಮೂಲಕ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ದೇವರಾದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿನ ಸರ್ಕಾರಿ ಖಾರಿಜಖಾತಾ ಸರ್ವೆ ನಂ.183/ಅ ರಲ್ಲಿ ಕ್ಷೇತ್ರ 35-24 ಎಕರೆ/ ಗುಂಟೆ ಜಮೀನಿನ ಪೈಕಿ 10-00 ಎಕರೆ/ಗುಂಟೆ ಜಮೀನನ್ನು 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಕಾಯ್ದಿರಿಸಿದ ಜಮೀನನ್ನು ರದ್ದುಪಡಿಸಿ ಸರ್ಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಇರುವ 31-33 ಎಕರೆ/ ಗುಂಟೆ ಜಮೀನಿನಲ್ಲಿ ಪೋಟ ಖರಾಬ 00-15 ಗುಂಟೆ ಇದ್ದು, ಉಳಿದ ಒಟ್ಟು ಕ್ಷೇತ್ರ 31-18 ಎಕರೆ/ ಗುಂಟೆ ಜಮೀನಿನಲ್ಲಿ 10-00 ಎಕರೆ/ ಗುಂಟೆ ಜಮೀನನ್ನು ಪ್ರಸ್ತಾಪಿತ ಉದ್ದೇಶಕ್ಕಾಗಿ ಮಂಜೂರಿಸಲು ಕೋರಿರುತ್ತಾರೆ.

ಉಲ್ಲೇಖಿತ (3) ರ ಪತ್ರದ ಮೂಲಕ ಸಹಾಯಕ ಆಯುಕ್ತರು, ಯಾದಗಿರಿ ಇವರು ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ದೇವರಾದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿನ ಸರ್ಕಾರಿ ಖಾರಿಜಖಾತಾ ಸರ್ವೆ ನಂ.183/ಅ ರಲ್ಲಿ ಕ್ಷೇತ್ರ 35-24 ಎಕರೆ/ ಗುಂಟೆ ಜಮೀನಿನ ಪೈಕಿ 10-00 ಎಕರೆ/ಗುಂಟೆ ಜಮೀನನ್ನು 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಕಾಯ್ದಿರಿಸಿದ ಜಮೀನನ್ನು ರದ್ದುಪಡಿಸಿ ಸರ್ಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಇರುವ ಕ್ಷೇತ್ರ 31-33 ಎಕರೆ/ ಗುಂಟೆ ಜಮೀನಿನಲ್ಲಿ ಪೋಟ ಖರಾಬ 00-15 ಗುಂಟೆ ಇದ್ದು, ಉಳಿದ ಒಟ್ಟು ಕ್ಷೇತ್ರ 31-18 ಎಕರೆ/ ಗುಂಟೆ ಜಮೀನಿನಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಡಿ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಲು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆ ಪರಿಶೀಲಿಸಲಾಗಿ ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ದೇವರಾದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿನ ಸರ್ಕಾರಿ ಖಾರಿಜಖಾತಾ ಸರ್ವೆ ನಂ.183/ಅ ರಲ್ಲಿ ಕ್ಷೇತ್ರ 35-24 ಎಕರೆ/ ಗುಂಟೆ ಜಮೀನಿನ ಪೈಕಿ 10-00 ಎಕರೆ/ಗುಂಟೆ ಜಮೀನನ್ನು 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಕಾಯ್ದಿರಿಸಿದ ಜಮೀನನ್ನು ರದ್ದಪಡಿಸಿ, ಸದರಿ 160 ಮನೆಗಳನ್ನು ಸ್ಥಳಾಂತರಿಸಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಇರುವ 31-33 ಎಕರೆ/ ಗುಂಟೆ ಜಮೀನಿನಲ್ಲಿ ಪೋಟ ಖರಾಬ 00-15 ಗುಂಟೆ ಇದ್ದು, ಉಳಿದ ಒಟ್ಟು ಕ್ಷೇತ್ರ 31-18 ಎಕರೆ/ ಗುಂಟೆ ಜಮೀನಿನಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಮಂಜೂರಿಸಲು ಶಿಫಾರಸ್ಸು ಮಾಡಿದ್ದು, ಪ್ರಸ್ತಾವನೆಯ ಚೆಕ್ ಲಿಸ್ಟ್ ಕ್ರಮ ಸಂಖ್ಯೆ 21ರ ಪ್ರಕಾರ ಸದರಿ ಜಮೀನು ಅರಣ್ಯ ಇಲಾಖೆಯ ಜಮೀನಾಗಿರುವುದಿಲ್ಲ ಹಾಗೂ ಪ್ರಸ್ತಾವಿತ ಜಮೀನಿಗೆ ಸೂಕ್ತವಾದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ / ಆರ್ ಡಿ/70/ ಎಲ್ ಜಿಸಿ /2008 ದಿನಾಂಕ : 08.08.2008 ರನ್ವಯ ಸರ್ಕಾರಿ ಜಮೀನುಗಳನ್ನು ಸಾರ್ವಜನಿಕರ ವಿವಿಧ ಉದ್ದೇಶಗಳಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ 04-00 ಹೆಕ್ಟರ್ (09-36 ಎಕರೆ/ ಗುಂಟೆ) ವರೆಗೆ ಮಾತ್ರ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.

ಸದರಿ ವಿಷಯವು ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆ ಸಮಿತಿಗೆ ಉತ್ತರವನ್ನು ಸಲ್ಲಿಸಬೇಕಾಗಿರುವುದರಿಂದ ಸಹಾಯಕ ಆಯುಕ್ತರು, ಯಾದಗಿರಿ ಇವರ ಶಿಫಾರಸ್ಸಿನನ್ವಯ ಹಾಗೂ ತಹಸೀಲ್ದಾರರು, ಹುಣಸಗಿ ಇವರ ವರದಿಯನ್ನಾಧರಿಸಿ, ಉಲ್ಲೇಖಿತ (04) ರ ಪತ್ರದ ಮೂಲಕ ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ದೇವರಾದಾಸಿಮಯ್ಯ ಹುಟಿದ ಸಳದಲಿನ ಸರ್ಕಾರಿ ಖಾರಿಜಖಾತಾ ಸರ್ವೆ ನಂ. 183/ಅ ರಲ್ಲಿ ಕ್ಷೇತ್ರ 35-24 ಎಕರೆ/ ಗುಂಟೆ

Scanned with OKEN Scanner

ಜಮೀನಿನ ಪೈಕಿ 10-00 ಎಕರೆ/ಗುಂಟೆ ಜಮೀನನ್ನು 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಕಾಯ್ದಿರಿಸಿದ ಜಮೀನನ್ನು ರದ್ದುಪಡಿಸಿ, ಸರ್ಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಇರುವ 31-33 ಎಕರೆ/ ಗುಂಟೆ ಜಮೀನಿನಲ್ಲಿ ಪೋಟ ಖರಾಬ 00-15 ಗುಂಟೆ ಇದ್ದು, ಉಳಿದ ಒಟ್ಟು ಕ್ಷೇತ್ರ 31-18 ಎಕರೆ/ ಗುಂಟೆ ಜಮೀನಿನಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ಪ್ರಸ್ತಾವಿತ ಉದ್ದೇಶಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರಡಿ ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಮುಂದುವರೆದು, ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ಶ್ರೀ ದೇವರದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿ 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಜಮೀನನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಾದೇಶಿಕ ಆಯುಕ್ತರು, ಮೂಲಕ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುತ್ತಾರೆ. ಪ್ರಯುಕ್ತ ಈಗಾಗಲೇ ಮೇಲೆ ವಿವರಿಸಿದಂತೆ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮುದನೂರು (ಬಿ) ಗ್ರಾಮದ ದೇವರದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿನ ಸರ್ಕಾರಿ ಖಾರಿಜಖಾತಾ ಸರ್ವೆ ನಂ.163/ಅ ರಲ್ಲಿ ಕ್ಷೇತ್ರ 35-24 ಎಕರೆ/ ಗುಂಟೆ ಜಮೀನಿನ ಪೈಕಿ 10-00 ಎಕರೆ/ಗುಂಟೆ ಜಮೀನನ್ನು 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಕಾಯ್ದಿರಿಸಿದ ಜಮೀನನ್ನು ರದ್ದುಪಡಿಸಿ, ಸರ್ಕಾರಿ ಖಾರಿಜಖಾತಾ ಸರ್ವೆ ನಂ. 239/2 ರಲ್ಲಿ ಇರುವ 31-33 ಎಕರೆ/ ಗುಂಟೆ ಜಮೀನಿನಲ್ಲಿ ಪೋಟ ಖರಾಬ 00-15 ಗುಂಟೆ ಇದ್ದು, ಉಳಿದ ಒಟ್ಟು ಕ್ಷೇತ್ರ 31-18 ಎಕರೆ/ ಗುಂಟೆ ಜಮೀನಿನಲ್ಲಿ ಕ್ಷೇತ್ರ 10-00 ಎಕರೆ/ ಗುಂಟೆ ಜಮೀನನ್ನು ಮುದನೂರು (ಬಿ) ಗ್ರಾಮದ ಶ್ರೀ ದೇವರದಾಸಿಮಯ್ಯ ಹುಟ್ಟಿದ ಸ್ಥಳದಲ್ಲಿ 160 ಮನೆಗಳನ್ನು ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರಡಿ ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮಾನ್ಯರಲ್ಲಿ ಕೋರಿದೆ.

ಅಡಕ: (ಮೂಲ ಪ್ರಸ್ತಾವನೆ)

ತಮ್ಮ ವಿಶ್ವಾಸಿ,

Digitally Signed by
Susheela B
ಜಿಲ್ಲಾಧಿಕಾರಿಗಳು
Date: 12-01-2024 13:46:48
Reason: Approved

ಪ್ರತಿಯನ್ನು :-

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಯಾದಗಿರಿ ಇವರಿಗೆ ಮಾಹಿತಿಗಾಗಿ.
2. ಸಹಾಯಕ ಆಯುಕ್ತರು, ಯಾದಗಿರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ತಹಸೀಲ್ದಾರರು, ಹುಣಸಗಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ/ ಹೆಚ್ಚುವರಿ ಪ್ರತಿಗಳು.

Scanned with OKEN Scanner